ರಾಮಣ್ಣಾ ನಿನ್ನ ಮೇಲೆ ಪಸಂದ್ ನಂಬಿಕೆ ಇಟ್ಟೇನ, ನೀನು ಒಳ್ಳೆದಕ ಬೈಯ್ದಿ ಅಂತಾ ಗೊತ್ತಾಗದ ನನಗ. ಏನ್ ಮಾಡೋದ ನಿನ್ನಂಗ ಇರಬೇಕಲ್ಲ ನನ್ನ ಭಕ್ತರು. ನನಗೂ ಸಾಕು ಬೇಕಾಗದ. ಮೂವತ್ತು ನಲವತ್ತು ವರ್ಷಗಳಿಂದ ಹೀಂಗ ಥಂಡಿ ಹಚ್ಕೊಂಡು ಮಳಿ, ಗಾಳಿ ಬಿಸಿಲು ಅನ್ನದ ಒಂದೇ ಸಮನ ಈ ಗರ್ಭಗುಡಿ ಅನ್ನೋ ಬಂಧಿಖಾನಿಯೊಳಗ ಉಸಿರಾಡಲಾರದಂಗ ಕುಂತೀನಿ. ಒಂದಿಷ್ಟು ಫ್ಯಾನು ಗೀನು ಟ್ಯುಬಲೈಟು, ನೆಲಕ್ಕ ಗ್ರಾನೈಟು ಹಾಕಸ್ರೀ. ನನ್ನ ಬುಡಕ್ಕ ಬೆಂಕಿ ಬಿದ್ದದ. ಅಲ್ಲೊಂದಿಷ್ಟು ಆರ್.ಸಿ.ಸಿ ಸಿಮೆಂಟ್ ಬಳಿದು ಭದ್ರ ಮಾಡ್ರೆಲ್ಲಾ. ಒಂದಿಷ್ಟು ನೀವೆಲ್ಲಾ ಕೂಡಿ ಹೈ-ಫೈ ಮಾಡ್ಸರ್ಲಾ. ನಾನು ಸ್ಮಾರ್ಟ್ ಇರಬೇಕೋ ಬ್ಯಾಡ್ವೋ ಅಂತಾ ಅದೇನು ಚಾಟ್ ಜಿಪಿಟಿ ತರಹ ಪಟಾಪಟ್ ಅಂತ ಡಿಜಿಟಲ್ ಮಾತುಗಳನ್ನೇ ಆಡಿದಳು ನಮ್ಮ ಮಾರೆಮ್ಮಾ.

ಭಕ್ತರಂತೂ ಅದೇ ಹಳೆ ಕಂಪನಿಯ, ಒಂದಿಷ್ಟು ಹೊಸ ಮೆರಗಿನ ಪ್ಯಾಕ್‌ನಲ್ಲಿದ್ದ ಆನೆಲದ್ದಿಯಂತಹ ಊದುಬತ್ತಿ ಹಚ್ಚಿಕೊಂಡು ಮೇಲಿನ ಉಸಿರು ಕೆಳಕ್ಕೆ. ಕೆಳಗಿನ ಉಸಿರು ಮೇಲಕ್ಕೆ, ಬಿಡುತ್ತಾ ಕಣ್ಣುಚ್ಚಿಕೊಂಡು ಧ್ಯಾನ ಮಾಡ್ತಾ ಇದ್ರು. ಮಾರೆಮ್ಮ ಅವರಿಗೂ ನೀರ ಚುಮಕಿಸಿ, ಲೋಬಾನದ ಹೊಗೆ ತಾಗಿಸಿ ಆಗಾಗ ಗಾಂಧಿ ಕಾಲದ ಹಳೆ ಬೆತ್ತ ಹಿಡಿದು ಎಚ್ಚರಿಸುತ್ತಿದ್ದಳು. ಆದರೆ ರಾಮಣ್ಣ ಮಾತ್ರ ಮೈಯಲ್ಲಾ ಎಚ್ಚರವಾಗಿಯೇ ಈ ಆಟ ನೋಡುವವನಂತೆಯೇ ನಿಂತಿದ್ದ. ಅಲ್ನೋಡು ನನ್ನ ತಮ್ಮ ಆಂಜನೇಯಪ್ಪನ ಪೂಜಾರಿ ಹ್ಯಾಂಗ ಆ್ಯಪಲ್ ಆಂಡ್ರಾಯ್ಡ್ ಸ್ಮಾರ್ಟ್ ಫೋನ್ ಕಿವಿಯಲ್ಲಿಟ್ಟುಕೊಂಡು; ಒಂದ ಕೈಯಲ್ಲಿ ಗಂಟೆ ಇನ್ನೊಂದು ಕೈಯಲ್ಲಿ ಬೆಳ್ಳಿ ಆರತಿ ತಟ್ಟೆ ಹಿಡಿದು, ಸಿಂಹದಂತಹ ತಲೆ ಕೊಡವಿ ಕುಂತಂಗ ಕುಂತಾನ. ಈ ನನ್ನ ಹಾಳ ಪೂಜಾರಿ ಅದ್ಯಾವ ಸುಡುಗ್ಯಾಡಿಗೇ ಹೋಗೈತೋ ಏನೋ? ನನ್ನ ಒಳಗ ಕದಾ ಹಾಕಿ ಬೀಗ ಜಡಿದು ಹೋಗಿದ್ದು ಬರೋದು ಮೂರಾ ಸಂಜೆ. ಅದೂ ನಾನ ಹಸಗೊಂಡ ಮ್ಯಾಲೆ, ಮಿಸ್ಡ್ ಕಾಲ್ ಕೊಡಾಕ, ವ್ಯಾಟ್ಸಾಪ್ ವೀಡಿಯೋ ಕಾಲ್ ಮಾಡಾಕ ನಾನೇನು ಆ ಯಪ್ಪ ತಿರುಪತಿ ತಿಮ್ಮಪ್ಪನಾ ಅಂತ ಮಾರೆಮ್ಮ ಗೋಳು ಒಯ್ದುಕೊಳ್ಳುವುದನ್ನು ನಮ್ಮ ಕಿಡಗೇಡಿ ರಾಮಣ್ಣ ಕೇಳಿಸಿಕೊಂಡಿದ್ದ.

ಏನೋ ಒಂದು ಸುಖದ ಗಾಳಿ ಹೊರಟೈತಿ ಮಾರೆಮ್ಮ ನಿನಗೊಳ್ಳೆ ದಿಸೆ ತಾನಾಗಿ ತಿರುಗಿದಂಗ ಕಾಣಿಸ್ತೈತಿ. ನಮ್ಮ ಡೆಲ್ಲಿ ಸಾಹೇಬರು ಗೊತ್ತಾಯಿತಿಲ್ಲೋ, ಅದೇ ಸೆಲ್ಪಿ ಸಾಹೇಬರು 'ಮನ ಕೀ ಬಾತ್' ನಲ್ಲಿ ಅಚ್ಛೇ ದಿನ್‌ಗಳನ್ನು ಘೋಷಣಾ ಮಾಡ್ಯಾರ. ಎಲ್ಲರ ಹಣೆ ಬರಹಗಳನ್ನು ನಾನ ಬರಿತೀನಿ ಅಂತಾ ಒಂದೇ ಸಮನೆ ಹಠ ಹಿಡಿದು ಕುಂತಾರ. ನಿನ್ನದು ಒಂದ ಆಕೌಂಟ ಓಪನ್ ಆಗಿ ಹುಂಡಿಯಲ್ಲಿ ಸಂಪತ್ತು ಬೀಳುದ. ನಮ್ಮ ಜನರ ಬೆವರಿನ ದುಡ್ಡು ಸ್ಮಾರ್ಟ್ ಆಗಿ, ಫಿಲ್ಟರ್ ಆಗಿ ನೇರವಾಗಿ ನಿನ್ನಂತವರ ಆನ್‌ಲೈನ್ ಆಕೌಂಟಿಗೆ ಬರುವ ಹಾಗೆ ಮಾಡ್ತಾರಂತ. ಏನ್ ದೆಸೆ ಬೇ... ಜನ್‌ಮನ್, ಜನಾರ್ಧನ್.

ಈಗ್ ನೋಡು, ನಿನ್ನ ಹಿಡಿಯೋರ್ ಯಾರ್. ನೀನ್ ಸ್ಮಾರ್ಟ್ ಸಿಟಿ ಮಾರೆಮ್ಮ ಅದಿ. ನಿನ್ನ ಹುಂಡಿಗೆ ಬೀಳೋ ಕೇಜಿ ಕೇಜಿ ಬಂಗಾರನ ಅವರ ಕರಗಿಸಿ ತಿರಗ ಬಂಗಾರದ ಬಾಂಡ್ ಮಾಡಿಸಿ ಇಂಟರೆಸ್ಟ್ ಸಮೇತ ನಿನಗ ಕೊಡ್ತಾರಂತ. ಅದು ಬಂತು ಇದು ಬಂತು. ತಿಮ್ಮಪ್ಪ ನೋಡಲಾ, ಆಗಲೇ ತನ್ನ ಕೆಲಸ ಶುರು ಹಚ್ಕೊಂಡಾನ. ನಾನೂ ತಿರುಪತಿ ತಿಮ್ಮಪ್ಪನ ನೋಡಿದ್ದೆ ಬಿಡ. ದುಡ್ಡು ಅಂದ್ರ ದುಡ್ಡು ಅದು. ಕಾಲನ ಕಸಕ್ಕರ ಕಿಮ್ಮತ್ತ ಐತಿ. ಅಲ್ಲೇನಬೇ.... ನಮ್ಮ ತಲೆಗೆ ತಳದಂದಾದ್ರೂ ಕೊಬ್ರೆಣ್ಣೆ ಐತೋ, ಅದೂ ಇಲ್ಲ. ತಲೆ ಅನ್ನೋದು ಕೋಳಿ ಕೆದರಿದ ಹಾಳ ತಿಪ್ಪಿ ಆಗ್ಯಾದ. ಇರೋದು ಒಂದಾ ತಲಿ ಆಯಪ್ಪನದು. ಆದರೂ ನೂರಾರು ಕಿರೀಟಗಳು, ನೂರಾರು ಜರತಾರಿಗಳು ಶಿವನೇ..... ಅಂತ ಒಗಟಿನ ಹಾಗೆ ರಾಮಣ್ಣನೂ ಮಾತಾಡ್ತಾ ಇದ್ದ.

ಬೇಗ ಹೇಳಪ್ಪಾ ನನ್ನ ಗರ್ಭಗುಡಿಯ ಪುಜಾ ಸಮಯ ಮುಗಿಯಾಕ ಹತ್ತೈತಿ. ನಾನೊಂದಿಷ್ಟು ಸಂಸಾರಸ್ಥಳು. ಕಷ್ಟ-ಸುಖ ಹಂಚಿಕೊಂಡ ಬರಬೇಕೋ ಬ್ಯಾಡೋ. ಮನೆಯಲ್ಲಿ ನನ್ನವೂ ವಿಧಿಕರ್ಮಗಳನ್ನು ಮುಗಿಸಿಕೊಂಡು ಬರ್ತೀನಿ ಮತ್ತೆ ಮಾತನಾಡೋಣಂತ. ಒಂದೇ ಸಮನೆ ದಕ್ಕನೆ ಎದ್ದು ಇಳಿ ಬಿಟ್ಟಿದ್ದ ತಲೆಕೂದಲನ್ನು ಮೇಲಕ್ಕೆತ್ತಿ ಜಡೆಯಾಗಿ ಕಟ್ಟಿಕೊಂಡು ಗರ್ರನೆ ಅಂತಾ ಗರ್ಭಗುಡಿಯ ಬಾಗಿಲು ಹಾಕ್ಕೊಂಡು ಮನೆಗೆ ಹೊರಟಳು ಮಾರೆಮ್ಮ. ಭಕ್ತರು ಅವಳ ಸುಳಿವು ಅರಿತು ಅಲ್ಲಲ್ಲ: ಪೂಜಾರಿ ನಾಗಪ್ಪನ ಸ್ಥಿತಿಯ ಕಂಡು ಒಳಗೊಳಗೆ ಮುಸಿ ನಕ್ಕು ಮತ್ತೆ ದೇವಸ್ಥಾನದಲ್ಲೇ ಝೂಂಡಾ ಹೊಡೆದು ಕುಳಿತವರಂತೆ ಒಣ ಮಂಡಾಳು